**4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು**

**ಸಿಸಿ ನಂ. 7739/2016 ಚಾಸಾಃ 8 ಪ್ರಾಸಾಃ 2**

| | | |
|---|---|---|
| ಸಾಕ್ಷಿದಾರರ ಹೆಸರು | : | ಕೆ.ವೆಂಕಟೇಶ್ |
| ತಂದೆಯ ಹೆಸರು | : | ಕಾಳಪ್ಪ |
| ವಯಸ್ಸು | : | 50 ವರ್ಷ |
| ವೃತ್ತಿ | : | ಪಿ.ಐ. |
| ವಾಸ | : | ಕೆಂಗೇರಿ, ಬೆಂಗಳೂರು |

**ಸಾಕ್ಷಿಯನ್ನು ದಿಃ 15.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸ.ಸ.ಅ ರವರಿಂದಃ-**

ನಾನು ಫೆಬ್ರುವರಿ-2015 ರಿಂದ ಜನವರಿ-2017 ರವರೆಗೆ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ08.05.2015 ರಂದು ಮದ್ಯಾಹ್ನ 3.20 ಗಂಟೆಗೆ ಚಾಸಾ-1 ರವರು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಅಪರಾದ ಕ್ರಮಾಂಕ 150/2015 ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ ಸಲ್ಲಿಸಿರುತ್ತೇನೆ. ದೂರಿನಲ್ಲಿ ನನ್ನ ಸಹಿಯನ್ನು ಗುರ್ತಿಸುತ್ತೇನೆ. ದೂರನ್ನು ಈಗಾಗಲೇ ನಿಪಿ-3 ಎಂದು ಗುರ್ತಿಸಲಾಗಿದೆ. ನಿಪಿ-3 ರಲ್ಲಿರುವ ನನ್ನ ಸಹಿಯನ್ನು ನಿಪಿ-3ಎ ಎಂದು ಗುರ್ತಿಸಲಾಯಿತು. ಪ್ರ.ವ.ವರದಿಯನ್ನು ನೋಡಿ ಗುರ್ತಿಸುತ್ತೇನೆ. ಪ್ರ.ವ.ವರದಿಯನ್ನು ನಿಪಿ-4 ಎಂದು ಗುರ್ತಿಸಲಾಯಿತು. ನಿಪಿ-4 ರಲ್ಲಿರುವ ನನ್ನ ಸಹಿಯನ್ನು ಗುರ್ತಿಸುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-4ಎ ಎಂದು ಗುರ್ತಿಸುತ್ತೇನೆ. ಅದೇ ದಿನ ಚಾಸಾ-1 ರವರು ಹಾಜರುಪಡಿಸಿದ ಪಿರ್ಯಾದುದಾರರು ಮತ್ತು ಆರೋಪಿಗೆ ಸಂಬಂಧಿಸಿದ ಎಂ.ಒ.ಯು ಹಾಗೂ ಪಿರ್ಯಾದುದುದಾರರು ಆರೋಪಿಗೆ ನೀಡಿದ ರೂ.24,50,000/- ಗೆ ಸಂಬಂಧಿಸಿದ ಐಸಿಐಸಿಐ ಬ್ಯಾಂಕ್ ನ ಸ್ಟೇಟ್ ಮೆಂಟ್ ನ ದೃಡೀಕೃತ ನಕಲುಗಳನ್ನು ಪಡೆದು

ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಎಂ.ಒ.ಯು ನ ದೃಡೀಕೃತ ನಕಲನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-5 ಎಂದು ಗುರ್ತಿಸಲಾಯಿತು. ಪಿರ್ಯಾದುದುದಾರರು ಆರೋಪಿಗೆ ನೀಡಿದ ರೂ.24,50,000/- ಗೆ ಸಂಬಂಧಿಸಿದ ಐಸಿಐಸಿಐ ಬ್ಯಾಂಕ್ ನ ಸ್ಟೇಟ್ ಮೆಂಟ್ ನ ದೃಡೀಕೃತ ನಕಲುಗಳನ್ನು ನಿಪಿ-6 ಎಂದು ಗುರ್ತಿಸಲಾಯಿತು.

ಅದೇ ದಿನ ಕೃತ್ಯ ಸ್ಥಳವಾದ ಕರ್ನಾಟಕ ಬ್ಯಾಂಕ್, ಕೆಂಗೇರಿ ಉಪನಗರ ಶಾಖೆಯಲ್ಲಿ ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಸಂಜೆ 4 ರಿಂದ 4.30 ಗಂಟೆಯ ಸಮಯದಲ್ಲಿ ಮಹಜರು ಕ್ರಮ ಜರುಗಿಸಿರುತ್ತೇನೆ. ಸ್ಥಳ ಪಂಚನಾಮೆಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-7 ಎಂದು ಗುರ್ತಿಸಲಾಯಿತು. ನಿಪಿ-7 ರಲ್ಲಿರುವ ನನ್ನ ಸಹಿಯನ್ನು ನಿಪಿ-7ಎ ಎಂದು ಗುರ್ತಿಸಲಾಯಿತು. ದಿಃ15.05.2015 ರಂದು ಚಾಸಾ-2 ಮತ್ತು 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ22.05.2015 ರಂದು ಕರ್ನಾಟಕ ಬ್ಯಾಂಕ್ ಮ್ಯಾನೇಜರ್ ರವರಿಗೆ ಪತ್ರ ವ್ಯವಹಾರ ಮಾಡಿ ದಿಃ01.02.2015 ರಿಂದ 15.05.2015 ರವರೆಗೆ ಆರೋಪಿಯ ಬ್ಯಾಂಕ್ ಸ್ಟೇಟ್ ಮೆಂಟ್, ಬ್ಯಾಂಕ್ ಖಾತೆ ತೆರೆಯುವಾಗ ಆರೋಪಿ ಸಲ್ಲಿಸಿದ ದಾಖಲಾತಿಗಳು ಮತ್ತು ಆರೋಪಿಗೆ ಬ್ಯಾಂಕಿನಿಂದ ಚೆಕ್ ಸಂ.9401905600520491 ವಿತರಿಸಿದ ಬಗ್ಗೆ ಮಾಹಿತಿ ಮತ್ತು ಆರೋಪಿ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೆ ಚೆಕ್ ಅನ್ನು ಹಿಂತಿರುಗಿಸಿದ ಬಗ್ಗೆ ವಿವರ ನೀಡುವಂತೆ ಪತ್ರ ವ್ಯವಹಾರ ಮಾಡಿರುತ್ತೇನೆ.

ದಿಃ06.10.2015 ರಂದು ಆರೋಪಿ ನಿಂಗೇಗೌಡ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾದಾಗ ಆರೋಪಿಯ ಸ್ವ ಇಚ್ಚಾ ಹೇಳಿಕೆಯನ್ನು ಪಡೆದು ರಾಜೇಶ್ ಎಂಬುವವರ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ13.10.2015 ರಂದು ಕರ್ನಾಟಕ ಬ್ಯಾಂಕ್ ಮ್ಯಾನೇಜರ್ ರವರು ನಾನು ಈ ಹಿಂದೆ ಕೋರಿದ ದಾಖಲಾತಿಗಳನ್ನು, ಅಕೌಂಟ್ ತೆರೆಯುವಾಗ ಆರೋಪಿ ನೀಡಿದ ದಾಖಲಾತಿಗಳಾದ ಡಿ.ಎಲ್, ಪಾನ್ ಕಾರ್ಡ್, ಬಿ.ಎಸ್.ಎನ್.ಎಲ್ ಟೆಲಿಫೋನ್ ನ

ಪ್ರತಿ ಮತ್ತು ಚೆಕ್ ನಂ.940190 ರಿಟರ್ನ್ ಆದ ಬಗ್ಗೆ ಇನ್ ವರ್ಡ್ ಸ್ಟೇಟ್‌ಮೆಂಟ್ ಹಾಗೂ ಚೆಕ್ ವಿತರಿಸಿದ ಬಗ್ಗೆ ಲೆಡ್ಜರ್ ಎಕ್ಸಾಟ್ರಾಕ್ಟ್ ಅನ್ನು ನೀಡಿದ ಬಗ್ಗೆ ಪರಿಶೀಲಿಸಿ ಬ್ಯಾಂಕ್ ಮ್ಯಾನೇಜರ್ ರಘುರಾಂ ರವರನ್ನು ಸಾಕ್ಷಿಯನ್ನಾಗಿ ಪರಿಗಣಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿಯ ಡಿ.ಎಲ್. ನ ನೈಜ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-8 ಎಂದು ಗುರ್ತಿಸಲಾಯಿತು. ಆಧಾರ್ ಕಾರ್ಡ್ ನ ನೈಜ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-9 ಎಂದು ಗುರ್ತಿಸಲಾಯಿತು. ಬಿ.ಎಸ್.ಎನ್.ಎಲ್ ಟೆಲಿಫೋನ್ ನ  ನ ನೈಜ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-10 ಎಂದು ಗುರ್ತಿಸಲಾಯಿತು.  ಚೆಕ್ ನಂ.940190 ರಿಟರ್ನ್ ಆದ ಬಗ್ಗೆ ಇನ್ ವರ್ಡ್  ಸ್ಟೇಟ್‌ಮೆಂಟ್ ನ ನೈಜ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-11 ಎಂದು ಗುರ್ತಿಸಲಾಯಿತು ಹಾಗೂ ಚೆಕ್ ವಿತರಿಸಿದ ಬಗ್ಗೆ ಲೆಡ್ಜರ್ ಎಕ್ಸಾಟ್ರಾಕ್ಟ್ ನ ನೈಜ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-12 ಎಂದು ಗುರ್ತಿಸಲಾಯಿತು. ಆರೋಪಿಯ ಬ್ಯಾಂಕ್ ಅಕೌಂಟ್ ಒಪನಿಂಗ್ ಫಾರಂ ನ ನೈಜ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-13 ಎಂದು ಗುರ್ತಿಸಲಾಯಿತು. ಎರಡು ಚೆಕ್ ಗಳ ಪ್ರತಿಯನ್ನು ಹಾಜರುಪಡಿಸಲಾಗಿದೆ. ದಿಃ16.10.2015 ರಂದು ನಾನು ಈ ಹಿಂದೆಯೇ ಆರೋಪಿಯ ಎಸ್.ಬಿ.ಐ ಬ್ಯಾಂಕ್ ನ ಅಕೌಂಟ್ ಸ್ಟೇಟ್‌ಮೆಂಟ್ ಅನ್ನು ಕೋರಿದ್ದು ಅದರಂತೆ ಎಸ್.ಬಿ.ಐ ಬ್ಯಾಂಕ್ ನವರು ಸ್ಟೇಟ್‌ಮೆಂಟ್ ಅನ್ನು ಕಳುಹಿಸಿದ್ದು ಅದನ್ನು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆ ಬ್ಯಾಂಕ್ ಸ್ಟೇಟ್‌ಮೆಂಟ್ ಅನ್ನು ಗುರ್ತಿಸುತ್ತೇನೆ. ಆ ಬ್ಯಾಂಕ್ ಸ್ಟೇಟ್‌ಮೆಂಟ್ ಅನ್ನು ಈಗಾಗಲೇ ನಿಪಿ-2 ಎಂದು ಗುರ್ತಿಸಲಾಗಿದೆ. ತನಿಖೆಯಲ್ಲಿ ಆರೋಪಿಯ ವಿರುದ್ಧ ಸಾಕಷ್ಟು ಪುರವೆಗಳು ದೊರಕಿದ್ದರಿಂದ ಆರೋಪಿ ವಿರುದ್ದ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**